# ವಲಸೆ ಕಾರ್ಮಿಕರ ಮಕ್ಕಳಿಗೆ ಅವಕಾಶಗಳು

ಶೋಭಾ ಎಲ್. ಕವೂರಿ ಮತ್ತು ಶುಭಾ ಹೆಚ್.ಕೆ.

**ಪೀಠಿಕೆ**

ವಿಶಾಲ ಹಾಗೂ ಸೈದ್ಧಾಂತಿಕವಾದ ಅರ್ಥದಲ್ಲಿ ಹೇಳುವುದಾದರೆ ಪ್ರತಿಯೊಂದು ಮಗುವೂ ತನ್ನ ಪೂರ್ಣ ಸಾಮರ್ಥ್ಯವನ್ನು ತಲುಪುವಂತೆ ಅದರ ಸಾಮರ್ಥ್ಯವರ್ಧನೆ ಮಾಡುವುದೇ ನಿಸ್ಸಂದೇಹವಾಗಿ ಶಿಕ್ಷಣದ ಮಹದುದ್ದೇಶ. ಕಲಿಕಾ ಪ್ರಕ್ರಿಯೆಗಳು ಪ್ರತಿಯೊಂದು ಮಗುವಿನ ಬೆಳವಣಿಗೆಯ ಹಂತ, ಕಲಿಯುವ ವೇಗ ಮತ್ತು ಕಲಿಕೆಗೆ ದೊರೆಯುವ ಪ್ರೇರಣೆಗೆ ತಕ್ಕಂತೆ ಬದಲಾಗುತ್ತಾ ಹೋಗುತ್ತವೆ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡರೂ, 'ಪ್ರತಿಯೊಂದು ಮಗುವೂ ಕಲಿಯಬಲ್ಲುದು' (Every child can learn) ಎಂಬ ದೃಢ ನಂಬಿಕೆಯು ಈ ಸಂವೇದನೆಯನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತದೆ. ಇಲ್ಲಿ ಹೇಳಲೇಬೇಕಾದ ಇನ್ನೊಂದು ವಾಸ್ತವ ಆಯಾಮವೆಂದರೆ ಆ ಮಗುವು ಕಲಿಕೆಯನ್ನು ಎಲ್ಲಿ ಅನುಭವಿಸುತ್ತದೋ ಮತ್ತು ವ್ಯವಹರಿಸುತ್ತದೋ ಆ ಬಾಹ್ಯ ಪರಿಸರ. ಉದಾಹರಣೆಗೆ ಮಗುವಿನ ಸಾಮಾಜಿಕ-ಆರ್ಥಿಕ ಹಿನ್ನೆಲೆ ಅನೇಕ ಬಾರಿ ಇದೇ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ ಮತ್ತು ಕಲಿಕಾ ಬೆಳವಣಿಗೆಯ ಮೇಲೆ ನಿರ್ಣಾಯಕವಾದ ಪರಿಣಾಮವನ್ನು ಬೀರುತ್ತದೆ. ಮಕ್ಕಳ ಕಲಿಕಾ ಸಾಮರ್ಥ್ಯಗಳ ಮೇಲೆ ಸನ್ನಿವೇಶಗಳು ನಿರ್ಬಂಧಗಳನ್ನು ಹೇರುವ ಬಗ್ಗೆ ಮತ್ತು ಅವರಿಗಾಗಿ ಸಾಂಸ್ಥಿಕ ಪ್ರಕ್ರಿಯೆಗಳನ್ನು ಕ್ರೋಢೀಕರಿಸುವಲ್ಲಿ ಎದುರಾಗುವ ಸವಾಲುಗಳ ಬಗ್ಗೆ ಒಂದು ಗಮನಾರ್ಹ ನಿದರ್ಶನವನ್ನು ಬೃಹತ್ ಮೆಟ್ರೋ ನಗರಗಳಲ್ಲಿರುವ ವಲಸೆ ಕಾರ್ಮಿಕರ ಮಕ್ಕಳ ಅನುಭವದಲ್ಲಿ ನಾವು ಕಾಣಬಹುದು. ನಿರ್ಮಾಣ ಕಾರ್ಯಗಳಲ್ಲಿ ಕೆಲಸ ಮಾಡಲು ನಾನಾ ರಾಜ್ಯಗಳ ಗ್ರಾಮೀಣ ಜನರು ಬೃಹತ್ ಪ್ರಮಾಣದಲ್ಲಿ ವಲಸೆ ಬರುತ್ತಾರೆ. ಇಂತಹ ಕಾಮಗಾರಿಗಳಲ್ಲಿ ತೊಡಗಿಕೊಳ್ಳುವವರಿಗೆ ಜೀವನಾಧಾರ ಹಾಗೂ ಭೌತಿಕ ಅಸ್ತಿತ್ವವೇ ಅನಿಶ್ಚಿತವಾಗಿರುತ್ತದೆ. ಹೀಗಿರುವಾಗ ಶಿಕ್ಷಣಕ್ಕಾಗಿ ಹಣ ವ್ಯಯ ಮಾಡುವುದು ಅವರ ಕಟ್ಟಕಡೆಯ ಆದ್ಯತೆಯಾಗಿರುತ್ತದೆ. ಇಷ್ಟು ಮಾತ್ರವಲ್ಲದೆ ಕೆಲಸಕ್ಕಾಗಿ ಮಕ್ಕಳ ಪಾಲಕರು ಊರಿಂದೂರಿಗೆ ಪ್ರವಾಸ ಮಾಡುತ್ತಲೇ ಇರಬೇಕಾಗುತ್ತದೆ. ಇದು ಮಕ್ಕಳ ಪಾಲಿಗೆ ಸ್ಥಿರತೆಯನ್ನು (ರಚನಾತ್ಮಕವಾಗಿಯೂ, ಸಮಯದ ಹಿನ್ನೆಲೆಯಲ್ಲಿಯೂ) ನೀಡುವುದಿಲ್ಲ. ಹಾಗಾಗಿ ಇವೆಲ್ಲವೂ ವ್ಯವಸ್ಥಿತವಾದ ಶೈಕ್ಷಣಿಕ ಪ್ರಕ್ರಿಯೆಯನ್ನು ರೂಪಿಸುವುದಕ್ಕೆ ಹತ್ತಾರು ಅಡ್ಡಿ ಆತಂಕಗಳನ್ನು ತಂದೊಡ್ಡುತ್ತವೆ.

ಇವನ್ನೆಲ್ಲ ಮನಸ್ಸಿನಲ್ಲಿ ಇಟ್ಟುಕೊಂಡೇ ಅಜೀಂ ಪ್ರೇಮ್‌ಜಿ ಫೌಂಡೇಷನ್ 2007ರಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ **ವಲಸೆ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ** (Education for Children of Migrant Labour- ECML) ಎಂಬ ಕಾರ್ಯಕ್ರಮವನ್ನು ಕಟ್ಟಡ ನಿರ್ಮಾಣಕಾರರ ನೆರವು ಮತ್ತು ಸಹಭಾಗಿತ್ವದಲ್ಲಿ ಬೆಂಗಳೂರಿನಲ್ಲಿರುವ ಎರಡು ನಿವೇಶನಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿ ಆರಂಭಿಸಿತು. ಒಂದು ವರ್ಷದ ಅವಧಿಯಲ್ಲಿ ಈ ಗುಂಪಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅವರ ಅಗತ್ಯಗಳಿಗೆ ತಕ್ಕಂತೆ ಸರ್ಕಾರದ ಆದೇಶಾನುಸಾರ ವಿಶೇಷವಾಗಿ ರೂಪಿಸಲಾದ ಪಠ್ಯಕ್ರಮವನ್ನು ಕಾರ್ಯಗತಗೊಳಿಸಿ ಮುಖ್ಯವಾಹಿನಿಗೆ ತರುವುದು ಈ ಕಾರ್ಯಕ್ರಮದ ಗುರಿ. ಈ ಕೇಂದ್ರಗಳಿಗೆ ಬರುವ ಬಹುತೇಕ ವಿದ್ಯಾರ್ಥಿಗಳು ಈ ಹಿಂದೆ ಸರ್ಕಾರಿ ದಾಖಲೆಗಳಲ್ಲಿ ಶಾಲೆ ತೊರೆದವರ ಪಟ್ಟಿಯಲ್ಲಿ ಇದ್ದವರು. ಈ ಮಕ್ಕಳಿಗೆ ಶಾಲಾ ಶಿಕ್ಷಣ ಎಂದೂ ಖುಷಿಯ ಅನುಭವವನ್ನು ಕೊಟ್ಟಿರುವುದಿಲ್ಲ. ಸರಿಯಾಗಿ ಶಾಲೆಗೆ ಬಾರದೇ ಇದ್ದುದಕ್ಕೆ, ಸರಿಯಾಗಿ ಅವರಿಗೆ ಓದಲು ಬಾರದಿರುವುದಕ್ಕೆ, ಹೋಮ್‌ವರ್ಕ್ ಪೂರ್ಣಗೊಳಿಸಲು ಅವರಿಂದ ಸಾಧ್ಯವಾಗದಿರುವುದಕ್ಕೆ ಅವರನ್ನು ತರಾಟೆಗೆ ತೆಗೆದು-ಕೊಳ್ಳಲಾಗಿರುತ್ತದೆ, ಏಕೆಂದರೆ ಅನಿವಾರ್ಯವಾಗಿ ಇಂತಹ ಮಕ್ಕಳಿಗೆ ನಿರಂತರವಾಗಿ ಶಾಲೆಗೆ ಹಾಜರಾಗುವುದೇ ದೊಡ್ಡ ಸವಾಲಾಗಿರುತ್ತದೆ ಮತ್ತು ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿರುತ್ತದೆ. ಹೀಗಾಗಿ ಕಲಿಕೆಯಲ್ಲಿ ಅಂತರ ನಿಶ್ಚಿತವಾಗಿ ಇರುತ್ತದೆ. ಇಂಥ ಮಕ್ಕಳು ಶಾಲೆಗೆ ಹೋಗುವುದರಲ್ಲಿ ಮತ್ತು ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಂಡರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಕಾರಣದಿಂದ ಅವರ ಶೈಕ್ಷಣಿಕ ಅಗತ್ಯಗಳನ್ನು ಒದಗಿಸುವ ಸಂದರ್ಭದಲ್ಲಿ ಅವರಿಗಿರುವ ನಿರ್ಬಂಧದ ಸನ್ನಿವೇಶಗಳು ಮತ್ತು ಅನಿಶ್ಚಿತತೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ಈ ಕೇಂದ್ರಗಳಲ್ಲಿ ಕಲಿಯುತ್ತಿರುವ ಕೆಲವು ಮಕ್ಕಳ ಉದಾಹರಣೆಗಳನ್ನೇ (ಬಾಕ್ಸ್ ನೋಡಿ) ತೆಗೆದುಕೊಂಡರೆ, ಇಸಿಎಂಎಲ್ ಕಾರ್ಯಕ್ರಮವು ಅವರಿಗೆ ನಿಸ್ಸಂದೇಹವಾಗಿ ಕಲಿಕೆಯನ್ನು ಗಣನೀಯವಾಗಿ ಸುಧಾರಿಸಿಕೊಳ್ಳಲು ಮತ್ತು ತಮ್ಮ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಲು ಅವಕಾಶ ದೊರಕಿಸಿಕೊಟ್ಟಿದೆ. ವಿಶಾಲ ವ್ಯಾಪ್ತಿಯಲ್ಲಿ ಸಹ ಉತ್ತಮ ಶೈಕ್ಷಣಿಕ ಫಲಿತಾಂಶಗಳಿಂದ ಈ ಕಾರ್ಯಕ್ರಮವು ಮಕ್ಕಳ ಜೀವನದ ಮೇಲೆ ಉತ್ತಮ ಪ್ರಭಾವ ಬೀರಿದೆ ಎಂದು ಅಂಕಿ-ಅಂಶಗಳು ತೋರಿಸುತ್ತವೆ. ದಾಖಲೆಗಳ ಪ್ರಕಾರ ಕಳೆದ 12 ವರ್ಷಗಳ ಅವಧಿಯಲ್ಲಿ ಈ ಸೇತುಬಂಧ ಕಾರ್ಯಕ್ರಮವು (Bridge Programme) ಸುಮಾರು 1700 ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸಿದೆ. ಇವರಲ್ಲಿ 745 ಮಕ್ಕಳು ಯಶಸ್ವಿಯಾಗಿ ಮುಖ್ಯವಾಹಿನಿಯ ಶಿಕ್ಷಣ ವ್ಯವಸ್ಥೆಗೆ ಸೇರಿ ಕಲಿಯುತ್ತಿದ್ದಾರೆ. ಇಷ್ಟು ಮಾತ್ರವಲ್ಲದೆ, ಮಕ್ಕಳ ಕುಟುಂಬ ನಿರಂತರವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವ ಕಾರಣದಿಂದ ಈ ಮಕ್ಕಳು ಮುಂದೆ ಏನು ಮಾಡುತ್ತಿದ್ದಾರೆ ಎಂದು ಜಾಡು ಹಿಡಿಯುವುದಕ್ಕೆ ವಾಸ್ತವ ಇತಿಮಿತಿಗಳಿರುವುದರಿಂದ ಈ ಮಕ್ಕಳು ಇನ್ನೆಲ್ಲೋ ಶಿಕ್ಷಣವನ್ನು ಮುಂದುವರಿಸಿರಬಹುದು. ಆದರೆ ನಮ್ಮ ಕೇಂದ್ರಗಳ ದಾಖಲೆಗಳಲ್ಲಿ ಅವರ ಹೆಸರು ಲಭ್ಯವಿರುವುದಿಲ್ಲ.

**ನಾನು ಕಲಿಯಬೇಕು ಮತ್ತು ನನಗೆ ಗೊತ್ತಿದೆ ನಾನದನ್ನು ಮಾಡಬಲ್ಲೆ**

ಕೇಂದ್ರದಲ್ಲಿದ್ದ ಮಕ್ಕಳ ಬದುಕಿನ ಇಣುಕುನೋಟ.*

ಸುಮತಿ ರಾಯಚೂರಿನಿಂದ ತನ್ನ ಪಾಲಕರೊಂದಿಗೆ ಬಂದಿದ್ದಳು. ಬೆಂಗಳೂರಿನಲ್ಲಿ ಆಕೆ ತನ್ನ ಅಕ್ಕನ/ಅಣ್ಣನ

ಮಗುವನ್ನು ನೋಡಿಕೊಳ್ಳಬೇಕಾಗಿತ್ತು. ಆ ಮಗುವನ್ನು ನಮ್ಮ ಕೇಂದ್ರದಲ್ಲಿ ದಾಖಲೆ ಮಾಡಿಕೊಂಡಾಗ ನಾವು ಆಕೆಯ ಪಾಲಕರಲ್ಲಿ, ಸುಮತಿಯನ್ನು ಸರ್ಕಾರಿ ಶಾಲೆಯಲ್ಲಿ ನೋಂದಣಿ ಮಾಡಿಸುವಂತೆ ಮನವೊಲಿಸಿದೆವು. ತದನಂತರ ಆಕೆಯು ವಾಡಿಕೆಯ ಶಾಲಾ ಶಿಕ್ಷಣಕ್ಕೆ ಸೇರಿಕೊಳ್ಳುವುದು ಸಾಧ್ಯವಾಗುವಂತೆ ಸಿದ್ಧವಾಗಲು ಕೇಂದ್ರಕ್ಕೆ ಒಂದು ವರ್ಷ ಬಂದು ಕಲಿತಳು. ಹಿಂಜರಿಕೆ, ನಾಚಿಕೆ ಮತ್ತು ಶಾಲೆ ಬಿಟ್ಟಾಕೆ ಎಂಬ ಹಣೆಪಟ್ಟಿಗೆ ಒಳಗಾಗಿದ್ದ ಸುಮತಿ ಇಂದು ಪಿಯುಸಿ ವಿದ್ಯಾರ್ಥಿನಿ ಮತ್ತು ವೇದಿಕೆಯ ಮೇಲೆ ನಿಂತು ಸಂತೋಷದಿಂದ ಕೆಲಸ ಮಾಡುತ್ತಾಳೆ. ತನ್ನ ಶಾಲೆಯಲ್ಲಿ ಹಾಗೂ ಕೇಂದ್ರದಲ್ಲಿ ನಡೆಯುವ ವಾರ್ಷಿಕ ಕಾರ್ಯಕ್ರಮದಲ್ಲಿ ಆಕೆಯೇ ಮುಂದೆ ನಿಂತು ಕಾರ್ಯಕ್ರಮಗಳನ್ನು ನಡೆಸಿ-ಕೊಡುವ ಹಂತಕ್ಕೆ ಬೆಳೆದಿದ್ದಾಳೆ.

ಆಂಧ್ರದಿಂದ ಬಂದಿದ್ದ ಏಳು ವರ್ಷ ವಯಸ್ಸಿನ ಭೀಮಾ ಈ ಹಿಂದೆ ಶಾಲೆಯನ್ನು ತೊರೆದಿದ್ದ. ಒಮ್ಮೆ ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಆತನ ಪಾಲಕರು ಭೀಮ ಮತ್ತು ಆತನ ಇಬ್ಬರು ಸಹೋದರರನ್ನು ಕೇಂದ್ರಕ್ಕೆ ಕರೆತಂದರು. ಭೀಮ ಮತ್ತು ಆತನಿಗಿಂತ ಒಂದುವರ್ಷ ಚಿಕ್ಕವನಾದ ತಮ್ಮನನ್ನು ಸ್ಥಳೀಯ ಸರ್ಕಾರಿ ಶಾಲೆಯಲ್ಲಿ ನೋಂದಣಿ ಮಾಡಿಸಿದೆವು. ಕಿರಿಯ ತಮ್ಮ ಸಹ ಕೇಂದ್ರಕ್ಕೆ ಬಂದು ಪ್ಲೇಗ್ರೂಪ್‌ಗೆ ಸೇರಿಕೊಂಡನು. ವಾಡಿಕೆ ಶಾಲೆಗೆ ವರ್ಗಾವಣೆ ಹೊಂದುವ ಮುನ್ನ ಅವರಲ್ಲಿ ಪ್ರತಿಯೊಬ್ಬರೂ ಒಂದೆರಡು ವರ್ಷ ಕೇಂದ್ರದಲ್ಲಿ ಶಿಕ್ಷಣ ಪಡೆದರು. ಇಂದು ಮೂವರೂ ಸಹೋದರರು ಇಂಗ್ಲಿಷ್ ಮಾಧ್ಯಮದಲ್ಲಿ ಪದವಿ ಕೋರ್ಸ್‌ಗಳನ್ನು ಅಧ್ಯಯನ ಮಾಡುತ್ತಿದ್ದಾರೆ. ಭೀಮ ಉದಯೋನ್ಮುಖ ನೃತ್ಯ-ಸಂಯೋಜಕ, ಆತನ ಇನ್ನೊಬ್ಬ ಸಹೋದರ ಕಲಾವಿದ, ಕಂಪ್ಯೂಟರ್ ಸೈನ್ಸ್ ಪದವಿ ಅಧ್ಯಯನ ಮಾಡುತ್ತಿದ್ದಾನೆ. ಮೂರನೆಯವ ವಾಣಿಜ್ಯಕೋರ್ಸ್ ಆಯ್ಕೆ ಮಾಡಿಕೊಂಡಿದ್ದಾನೆ.

ವಿಷ್ಣು ಈ ಕೇಂದ್ರಕ್ಕೆ ಬಂದಾಗ ಆತನಿಗಿನ್ನೂ ಏಳು ವರ್ಷ. ಈ ಹಿಂದೆ ಒಂದು ವರ್ಷ ಆತ ಶಾಲೆಗೆ ಹೋಗಿರಲಿಲ್ಲ. ಸರ್ಕಾರಿ ಶಾಲೆಯ ನಾಲ್ಕನೇ ತರಗತಿಗೆ ಆತನನ್ನು ನೋಂದಣಿ ಮಾಡಿಸಲಾಯಿತು. ಕೇಂದ್ರದಲ್ಲಿಯೂ ಕೆಲಕಾಲ ಶಿಕ್ಷಣವನ್ನು ಪಡೆದನು. ಮುಂದೆ ಪಿಯೂವರೆಗೂ ಆತ ಶಿಕ್ಷಣವನ್ನು ಮುಂದುವರಿಸಿದನು. ಆತನಿಗೆ ಪದವಿ ಮುಗಿಸಲು ಸಾಧ್ಯವಾಗದೇ ಇದ್ದರೂ ಕುಟುಂಬ ನಿರ್ವಹಣೆಗಾಗಿ ಆತ್ಮವಿಶ್ವಾಸದಿಂದ ಕಂಟ್ರಾಕ್ಟರ್ ಆಗಿ ತನ್ನದೇ ಆದ ಉದ್ಯಮವನ್ನು ಆರಂಭಿಸಿದ್ದಾನೆ.

* ಮಕ್ಕಳ ಹೆಸರುಗಳನ್ನು ಬದಲಿಸಲಾಗಿದೆ
** ಆ ಸಮಯದಲ್ಲಿ ಸೇತುಬಂಧ ಕೋರ್ಸ್‌ಗಳಿಗೆ ಒಂದು ವರ್ಷ ಕಡ್ಡಾಯ ಎಂಬ ಸರ್ಕಾರಿ ನಿಯಮ ಇರಲಿಲ್ಲ.

**ಕಾರ್ಯಕ್ರಮದ ಬಹುಮುಖ್ಯ ಅಂಶಗಳು**

ಈ ಲೇಖನವು ಇಸಿಎಂಎಲ್ ಕಾರ್ಯಕ್ರಮದ ಮೂರು ವಿಭಿನ್ನ ಆದರೆ ಒಂದಕ್ಕೊಂದು ಸಂಬಂಧವನ್ನು ಹೊಂದಿರುವ ಅಂಶಗಳನ್ನು ಕುರಿತು ಹೇಳುತ್ತದೆ; ಈ ಕೇಂದ್ರಗಳಲ್ಲಿ ಅನುಸರಿಸುವ ಸಂಸ್ಕೃತಿ ಮತ್ತು ದಿನನಿತ್ಯದ ಪರಿಪಾಠಗಳು, ಪಠ್ಯಕ್ರಮಗಳು ಮತ್ತು ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಿ ಎಲ್ಲ ಹಿತಾಸಕ್ತಿದಾರರ ಸಹಭಾಗಿತ್ವದಂತಹ ನಿರ್ಣಾಯಕ ಅಂಶಗಳು. ಈ ಮಕ್ಕಳಲ್ಲಿ ಅನೇಕರು ಕಲಿಯಲು ಬೆಳವಣಿಗೆ ಹೊಂದಲು ಮತ್ತು ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ಯಾಕೆ ಸಾಧ್ಯವಾಗಿದೆ ಎಂಬುದರ ಬಗ್ಗೆ ಚಿಂತನೆ ನಡೆಸುವುದಕ್ಕೆ ಈ ಅಂಶಗಳು ಸಾಕ್ಷಿ ಒದಗಿಸುತ್ತವೆ.

ನಂಬಿಕೆ ಮತ್ತು ಆತ್ಮವಿಶ್ವಾಸವನ್ನು ಬೆಳೆಸುವ ಸಂಸ್ಕೃತಿ

ಮಕ್ಕಳಿಗೆ ತಮ್ಮದೇ ವೇಗದಲ್ಲಿ ಕಲಿಯಲು ಅವಕಾಶವನ್ನು ಒದಗಿಸಿದರೆ ಹಾಗೂ ಸಾಕಷ್ಟು ಬೆಂಬಲವನ್ನು ನೀಡಿದರೆ ಪ್ರತಿಯೊಂದು ಮಗುವು ಕೂಡ ಕಲಿಯುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ತನ್ನ ಕಲಿಕೆ ಹಾಗೂ ಬೆಳವಣಿಗೆಯಲ್ಲಿ ಯಶಸ್ಸನ್ನು ಕಾಣಬಲ್ಲದು ಎಂಬ ನಂಬಿಕೆಯೇ ಇಸಿಎಂಎಲ್ ಕೈಗೊಂಡಿರುವ ಈ ಉಪಕ್ರಮದ ತಾಯಿಬೇರು. ಇಲ್ಲಿ ಬರುವ ಹೆಚ್ಚಿನ ಮಕ್ಕಳ ಶಾಲಾ ಶಿಕ್ಷಣ ಕ್ರಮರಹಿತವಾಗಿ ಆಗಿರುತ್ತದೆ. ಹಾಗಾಗಿಯೇ ಅವರ ಅನುಭವವೂ ಕಳಪೆಯಾಗಿರುತ್ತದೆ. ಆದ್ದರಿಂದ ಮಕ್ಕಳಿಗೆ ಎಲ್ಲಿ ಸುರಕ್ಷಿತ ಹಾಗೂ ಕಾಳಜಿ ಇರುವ ವಾತಾವರಣ ಸಿಗುವುದೋ ಅಲ್ಲಿಯೇ ಅವರು ಕಲಿಕೆಯ ಕಾರ್ಯವನ್ನು ನಡೆಸುವ ಅವಕಾಶಗಳನ್ನು ನೀಡುವುದು ಈ ಕಾರ್ಯಕ್ರಮದ ಅತ್ಯಂತ ಮುಖ್ಯವಾದ ಅಂಶವಾಗಿದೆ.

ಅತ್ಯಂತ ಪ್ರಜ್ಞಾಪೂರ್ವಕ ಪ್ರಯತ್ನಗಳ ಫಲವಾಗಿ ಕಾಲಾನು-ಕ್ರಮದಲ್ಲಿ ಈ ಸಂಸ್ಕೃತಿ ಹೇಗೆ ಬೆಳೆಯಿತು ಎಂಬುದನ್ನು ಈ ಮುಂದಿನ ಪ್ಯಾರಾಗಳು ಚಿತ್ರಿಸುತ್ತವೆ.

- ಶಿಕ್ಷಕರಿಗೆ ವಿಶ್ವಾಸ ಗಳಿಸುವುದರ ಮೇಲೆ ಹೆಚ್ಚಿನ ಗಮನ ನೀಡಲಾಗುತ್ತದೆ. ಆದ್ದರಿಂದ ಶಿಸ್ತು ಕಲಿಸುವುದಕ್ಕಾಗಲೀ ಅಥವಾ ಪ್ರೇರಣೆ ನೀಡುವುದಕ್ಕಾಗಲೀ ಭಯ ಪ್ರಯೋಗ ಅಥವಾ ಬೆದರಿಕೆಯನ್ನು (ಸೂಚ್ಯವಾಗಿಯಾದರೂ) ಮಕ್ಕಳಿಗೆ ಯಾವತ್ತೂ ಮಾಡುವುದಿಲ್ಲ. ಹೊಸದಾಗಿ ನೇಮಕಗೊಂಡ ಶಿಕ್ಷಕರು ಇತರರು ಹೇಗೆ ಪರಿಸ್ಥಿತಿಗಳನ್ನು ನಿಭಾಯಿಸುತ್ತಾರೆ ಎಂಬುದನ್ನು ನೋಡಿ ಕಲಿತುಕೊಳ್ಳುತ್ತಾರೆ. ಮಕ್ಕಳು ಶಿಕ್ಷಕರ ಮೇಲೆ ನಂಬಿಕೆಯನ್ನು ಇಡುತ್ತಾರೆ ಮತ್ತು ಅವರೊಂದಿಗೆ ತಮ್ಮ ಯೋಚನೆಗಳು ಮತ್ತು ಸಮಸ್ಯೆಗಳನ್ನು ಹಂಚಿಕೊಳ್ಳುತ್ತಾರೆ.

- ಪರಿಣಾಮವಾಗಿ ತರಗತಿಯಲ್ಲಿ ಅಳವಡಿಸಿಕೊಳ್ಳಲಾದ ಬೋಧನಾ ವಿಧಾನವು ನಿರಂತರ ಜೊತೆಜೊತೆಯಾಗಿ ಕಲಿಯುವುದು, ಮಕ್ಕಳಿಗೆ ಹೊಸದರ ಶೋಧನೆಗೆ ಅವಕಾಶ ನೀಡುವುದು, ಮುಕ್ತವಾಗಿ ಚರ್ಚೆ ಮಾಡುವುದು ಮತ್ತು ಮಾತನಾಡುವುದಕ್ಕೆ ಹೆಚ್ಚಿನ ಒತ್ತು ನೀಡುತ್ತದೆ. ಉದಾಹರಣೆಗೆ ಅಸೆಂಬ್ಲಿಯಲ್ಲಿ ವಾರಕ್ಕೆ ಎರಡು ಬಾರಿ ನಡೆಯುವ ಅನುಭವ ಹಂಚಿಕೆ ಸಭೆಗಳಲ್ಲಿ ಮಕ್ಕಳು ಅನೇಕ ಬಾರಿ ಮನೆಯಲ್ಲಿನ ಸಮಸ್ಯೆಗಳ ಬಗ್ಗೆ ಬೇಸರಗೊಂಡ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ತಂದೆತಾಯಿಗಳ ನಡುವಿನ ಜಗಳಗಳು, ಅಪ್ಪನ ಕುಡಿಯುವ ಚಟ, ಅಮ್ಮನಿಗೆ ಹೊಡೆಯುವುದು ಅಥವಾ ನೆರೆಹೊರೆಯವರೊಂದಿಗೆ ನಡೆಯುವ ಜಗಳಗಳ ಬಗ್ಗೆ ಅವರು ಪ್ರಸ್ತಾಪ ಮಾಡುತ್ತಾರೆ. ಇಂತಹ ಸಭೆಗಳಲ್ಲಿ ಸಾಮಾನ್ಯವಾಗಿ ವಾತಾವರಣ ಶಾಂತ, ಕಳಕಳಿ ಹಾಗೂ ಅಕ್ಕರೆಯದಾಗಿರುತ್ತದೆ. ಶಿಕ್ಷಕರು ಈ ಸಂದರ್ಭದಲ್ಲಿ ಯಾವುದೇ ತೀರ್ಪು ನೀಡದೇ ಮಕ್ಕಳು ಹೇಳುವುದನ್ನು ಕೇಳಿಸಿಕೊಳ್ಳುತ್ತಾರೆ. ಕೆಲ ಸಮಯದ ಬಳಿಕ ಶಿಕ್ಷಕರು ಮಕ್ಕಳ ಮನೆಗೆ ಭೇಟಿ ನೀಡಿ ಪಾಲಕರ

ನಡವಳಿಕೆಯು ಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಮನವರಿಕೆ ಮಾಡಬಹುದು.

- ಮಕ್ಕಳು ಈ ಕೇಂದ್ರಕ್ಕೆ ಸೇರ್ಪಡೆಗೊಂಡಾಗ ಅವರಲ್ಲಿ ಎಲ್ಲ ವಯೋಮಾನದ ಮತ್ತು ಕಲಿಕೆಯ ನಾನಾ ಹಂತಗಳಲ್ಲಿರುವವರು ಇರುತ್ತಾರೆ. ಇಲ್ಲಿ ಅವರು ತಮ್ಮ ವಯಸ್ಸಿನ ಹೊರತಾಗಿಯೂ ಕಲಿಕೆಮಟ್ಟ ಆಧಾರಿತ ಗುಂಪುಗಳಲ್ಲಿ ಜೊತೆಯಾಗಿ ಕೆಲಸ ಮಾಡುತ್ತಾರೆ. ಹೀಗೆ ಎಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡುವ ವ್ಯವಸ್ಥೆಗೆ ಸಂಬಂಧಿಸಿದಂತೆ ಚಿಕ್ಕವರು ಮತ್ತು ದೊಡ್ಡ ಮಕ್ಕಳ ನಡುವೆ ನಡೆಯುವ ಮಿಶ್ರ ಭಾವನೆಗಳನ್ನು ನಿಭಾಯಿಸುವ ದೃಷ್ಟಿಯಿಂದ ಶಿಕ್ಷಕರು ನಾನಾ ಕಾರ್ಯತಂತ್ರಗಳನ್ನು ಬಳಸುತ್ತಾರೆ. ಆ ಗುಂಪಿನ ಒಳಗೇ ಕೆಲವು ನಿರ್ದಿಷ್ಟ ಜವಾಬ್ದಾರಿಗಳನ್ನು ಮಕ್ಕಳಿಗೆ ವಹಿಸಲಾಗುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಪ್ರತಿ ಮಗುವಿಗೂ ಗುಣಾತ್ಮಕ ಬಲವರ್ಧನೆ ನೀಡುವ ಕಡೆಗೆ ಮುತುವರ್ಜಿ ವಹಿಸಲಾಗುತ್ತದೆ. ಮಕ್ಕಳು ತಮ್ಮ ಕಲಿಕೆಯಲ್ಲಿ ಮುಂದಕ್ಕೆ ಕ್ರಮಿಸುತ್ತಲೇ ಅವರ ಗುಂಪುಗಳಲ್ಲಿಯೂ ಬದಲಾವಣೆಗಳಾಗುತ್ತವೆ. ಅಂತಿಮವಾಗಿ ಮಕ್ಕಳಿಗೆ ಮಿಶ್ರ ವಯೋಮಿತಿಯ ಗುಂಪುಗಳಲ್ಲಿ ಇರುವುದು ಏನೂ ಅನ್ನಿಸುವುದಿಲ್ಲ.

- ಕೇಂದ್ರದಲ್ಲಿ ಮೂರು ವಯೋಮಿತಿಯ ಗುಂಪುಗಳಿದ್ದು, ಪ್ರತಿಯೊಂದು ಗುಂಪಿಗೂ ನಿರ್ದಿಷ್ಟ ಪಠ್ಯಕ್ರಮವಿರುತ್ತದೆ. ಆದರೂ ಎಳೆಯ ವಯಸ್ಸಿನ ಮಕ್ಕಳು ತಮ್ಮ ಅಕ್ಕಅಣ್ಣಂದಿರ ಜೊತೆಗೆ ಕುಳಿತುಕೊಳ್ಳುವುದಕ್ಕೆ ಯಾವುದೇ ಅಭ್ಯಂತರ ಇರುವುದಿಲ್ಲ. ಆ ಕಿರಿಯ ಮಕ್ಕಳು ಕೇಂದ್ರಕ್ಕೆ ಹೊಂದಿಕೊಳ್ಳುವ ತನಕ ಇದನ್ನು ಮುಂದುವರಿಸಬಹುದು. ಇಂತಹ ಒಂದು ಕಾರ್ಯತಂತ್ರ ಮಕ್ಕಳ ನಡುವೆ ಅಕ್ಕರೆ ಹಾಗೂ ಕಾಳಜಿಯ ಸಂಸ್ಕೃತಿಯನ್ನು ಬೆಳೆಸುವಲ್ಲಿ ಸಹಾಯ ಮಾಡಿದೆ.

- ಮಕ್ಕಳಿಗೆ ಬೆಳಗ್ಗೆ ಹಾಲು ನೀಡಲಾಗುತ್ತದೆ, ಮಧ್ಯಾಹ್ನದ ಊಟ ಹಾಗೂ ಸಂಜೆ ಅವರು ಮನೆಗೆ ಮರಳುವುದಕ್ಕೆ ಮುನ್ನ ತಿಂಡಿ ನೀಡಲಾಗುತ್ತದೆ. ಶಿಕ್ಷಕರು ಮಕ್ಕಳ ಜೊತೆಗೇ ತಿಂಡಿ ಸೇವನೆ ಮಾಡುತ್ತಾರೆ. ಇದು ಅವರ ನಡುವೆ ಗಟ್ಟಿ ಬಾಂಧವ್ಯವನ್ನು ಬೆಸೆಯಲು ನಾಂದಿಯಾಗುತ್ತದೆ.

- ಕೆಲವು ಮಕ್ಕಳು ಆರಂಭದಲ್ಲಿ ಮಕ್ಕಳಿಗೆ ಹೊಡೆಯುವುದು, ಎಲ್ಲೆಂದರಲ್ಲಿ ಓಡಾಡುವುದು, ವಸ್ತುಗಳನ್ನು ಎಸೆಯುವುದು ಹಾಗೂ ಆಟಿಕೆಗಳು ಮತ್ತಿತರ ವಸ್ತುಗಳನ್ನು ಮರಳಿ ಅದೇ ಜಾಗದಲ್ಲಿ ಇಡದೇ ಇರುವುದು ಮುಂತಾದ ನಡವಳಿಕೆ ಸಮಸ್ಯೆಗಳನ್ನು ತೋರಿಸುತ್ತಾರೆ. ಇಂತಹ ನಡವಳಿಕೆಗಳನ್ನು ತಿದ್ದಲು ಶಿಕ್ಷಕರು ಮಕ್ಕಳಿಗೆ ಸಕಾರಣ ತಿಳುವಳಿಕೆಗಳನ್ನು ನೀಡಿ, ಅವರು ಹೇಗೆ ನಡೆದುಕೊಳ್ಳಬೇಕು, ಯಾಕೆ ಹಾಗೆ ನಡೆದುಕೊಳ್ಳಬೇಕು ಎಂಬುದನ್ನು ಮೃದುವಾಗಿ ಮನವರಿಕೆ ಮಾಡಿಸುತ್ತಾರೆ. ಕೆಲವು ವೇಳೆ ಹಿರಿಯ ಮಕ್ಕಳು ಕೂಡ ಅವರೊಡನೆ ಮಾತನಾಡಿ ತಿಳಿಹೇಳುವುದರಲ್ಲಿ ಸಹಾಯ ನೀಡುತ್ತಾರೆ.

- ಅಲ್ಲಿಂದ ಮುಂದೆ ಮುಖ್ಯವಾಹಿನಿ ಶಿಕ್ಷಣಕ್ಕೆ ಸೇರಿಕೊಂಡ ಮಕ್ಕಳಿಗೆ ಈ ಕೇಂದ್ರದ ಬಗ್ಗೆ ಇದು ನಮ್ಮದು ತಮ್ಮದೇ ಇನ್ನೊಂದು ಮನೆ ಎಂಬ ಅಕ್ಕರೆಯ ಭಾವನೆ ಇರುತ್ತದೆ. ಹೆಚ್ಚಿನ ಮಕ್ಕಳು ತಮ್ಮ ಶಾಲೆಗೆ ಹೋಗುವ ಮುನ್ನ ಮತ್ತು ಶಾಲೆಯಿಂದ ಮನೆಗೆ ತೆರಳುವ ಮೊದಲು ಈ ಕೇಂದ್ರಕ್ಕೆ ಭೇಟಿ ನೀಡುತ್ತಾರೆ. ಇತರರ ಜೊತೆ ಸಂಜೆಯ ತಿಂಡಿ ತಿನ್ನುತ್ತಾರೆ ಮತ್ತು ತಮ್ಮ ಹೋಮ್‌ವರ್ಕ್ ಅನ್ನು ಇಲ್ಲಿಯೇ ಮುಗಿಸುತ್ತಾರೆ. ಊಟ ಬಡಿಸುವುದು, ಸ್ವಚ್ಛಗೊಳಿಸುವುದು ಮುಂತಾದ ಕೆಲಸಗಳ ಮೂಲಕ ಅವರು ತಮಗಿಂತ ಚಿಕ್ಕವರ ಬಗ್ಗೆ ಕಾಳಜಿ ವಹಿಸುತ್ತಾರೆ. ಶಾಲೆಗೆ ರಜೆ ಇದ್ದಾಗ ಈ ಕೇಂದ್ರದ ಕ್ಲಾಸ್‌ರೂಮ್‌ನಲ್ಲಿ ಶಿಕ್ಷಕರಿಗೂ ನೆರವಾಗುತ್ತಾರೆ.

**ಪಠ್ಯಕ್ರಮ: ಮಾಡ್ಯೂಲರ್ ವಿಧಾನ**

ಈ ಕಾರ್ಯಕ್ರಮದಲ್ಲಿ ಬೆಳವಣಿಗೆ ಆಧಾರಿತ ಪಠ್ಯಕ್ರಮ ವಿಧಾನವನ್ನು ಅನುಸರಿಸಲಾಗಿದೆ. ಮಕ್ಕಳ ಸಾಮರ್ಥ್ಯ ಏನೇ ಇರಲಿ, ಎಲ್ಲರನ್ನೂ ಇದರಲ್ಲಿ ಒಳಗೊಳ್ಳುವಂತೆ ಮಾಡಲಾಗುತ್ತದೆ. ಮಕ್ಕಳನ್ನು ಅವರ ವಯಸ್ಸಿಗೆ ತಕ್ಕುದಾದ ಗುಂಪಿನಲ್ಲಿ ಸೇರಿಸಲಾಗುತ್ತದೆ– ಹಸುಗೂಸುಗಳು ಮತ್ತು ಅಂಬೆಗಾಲಿಡುವ ಮಗು (ಆರು ತಿಂಗಳಿಂದ 3 ವರ್ಷಗಳು), ಪ್ರೀ–ಸ್ಕೂಲ್ ಅಥವಾ ಶಾಲಾ ಪೂರ್ವದ ಮಕ್ಕಳು (3ರಿಂದ 6 ವರ್ಷ), ಪ್ರಾಥಮಿಕ ಶಾಲಾ ಗುಂಪು (6 ಮತ್ತು ಅದಕ್ಕಿಂತ ಹೆಚ್ಚಿನ ವರ್ಷಗಳ ಮಕ್ಕಳು). ಚಿಕ್ಕ ವಯಸ್ಸಿನ ಗುಂಪುಗಳಲ್ಲಿ ಪ್ರಾಥಮಿಕವಾಗಿ ಆರೋಗ್ಯ ಮತ್ತು ಪೌಷ್ಟಿಕಾಂಶದ ಬಗ್ಗೆ ಹೆಚ್ಚಿನ ಗಮನಹರಿಸಲಾಗುತ್ತದೆ. ಕೆಲವೊಂದು ಉತ್ತೇಜಕ ಅನುಭವ ನೀಡುವುದು ಮತ್ತು ಮಾತನಾಡುವುದನ್ನು ಕಲಿಸುವುದು ಮುಂತಾದ ಪ್ರಕ್ರಿಯೆಗಳು ಇಲ್ಲಿ ನಡೆಯುತ್ತವೆ.

ಕಲಿಕೆಯ ನಾನಾ ಕ್ಷೇತ್ರಗಳನ್ನು ಒಳಗೊಂಡ ಮತ್ತು ಮಕ್ಕಳಿಗೆ ಹೊಂದಿಕೆಯಾಗುವಂತಹ ಪಠ್ಯಕ್ರಮವನ್ನು ರೂಪಿಸುವ ಪ್ರಯತ್ನವನ್ನು ಮಾಡಲಾಗುತ್ತದೆ. ಹೊಸದಾಗಿ ಸೇರ್ಪಡೆ–ಗೊಂಡಿರುವ ಮಕ್ಕಳಿಗೆ ಸುತ್ತಲಿನ ಚಟುವಟಿಕೆಗಳು ಮತ್ತು ಪರಿಸರದ ಪರಿಚಯ ಮಾಡಿಸುವ ದೃಷ್ಟಿಯಿಂದ ಕೇಂದ್ರದ ಸುತ್ತಮುತ್ತ ಅಡ್ಡಾಡಿಕೊಂಡಿರಲು ಉತ್ತೇಜನ ನೀಡಲಾಗುತ್ತದೆ. ನಿರ್ಮಾಣ ಕಾಮಗಾರಿ ನಡೆಯುವ ನಿವೇಶನದಲ್ಲಿ ಅವರು ಕೆಲಕಾಲ ಇರುವುದು ಖಾತರಿಯಾದರೆ ಅವರನ್ನು ಹತ್ತಿರದ ಸರ್ಕಾರಿ ಶಾಲೆಯಲ್ಲಿ ನೋಂದಣಿ ಮಾಡಲಾಗುತ್ತದೆ. ಇದಾದ ಬಳಿಕ, ಆ ಮಕ್ಕಳೊಂದಿಗೆ ಸಂಪರ್ಕದಲ್ಲಿರುವ ಕೇಂದ್ರದ ಶಿಕ್ಷಕರು ಅವರ ಕಲಿಕಾ ಮಟ್ಟಗಳನ್ನು ಅಳೆಯುವ ಕಾರ್ಯವನ್ನು ಮುಗಿಸಿದ ನಂತರ ಅವರನ್ನು ಸೂಕ್ತವಾದ ಕಲಿಕಾ ಉಪ–ಗುಂಪುಗಳಲ್ಲಿ ಸೇರ್ಪಡೆ ಮಾಡುತ್ತಾರೆ.

ಈ ಗುಂಪಿನಲ್ಲಿರುವ ಮಕ್ಕಳನ್ನು ಮುಂದಿನ ಒಂದು ವರ್ಷದ ಅವಧಿಯಲ್ಲಿ ಶಿಕ್ಷಣದ ಮುಖ್ಯವಾಹಿನಿಗೆ ಸೇರಿಸಬೇಕಾಗಿರುವುದರಿಂದ ಮಾಡ್ಯೂಲರ್ ವಿಧಾನವನ್ನು ಅಳವಡಿಸಿಕೊಳ್ಳಲಾಗುತ್ತದೆ. ಪಾಲಕರು ಕೆಲಸ ಮಾಡುವ ನಿವೇಶನದಲ್ಲಿ ಮಕ್ಕಳು ಬಹಳ ಕಾಲ ಇರುವುದು ಅನಿಶ್ಚಿತವಾದ ಕಾರಣ ಪ್ರತಿಯೊಂದು ಮಾಡ್ಯೂಲ್ ಕೂಡ ಒಂದು ಪರಿಪೂರ್ಣ ಘಟಕವಾಗಿರುತ್ತದೆ; ಇಲ್ಲಿ ಕನ್ನಡ ಮತ್ತು ಇಂಗ್ಲಿಷ್, ಗಣಿತ ಹಾಗೂ ಪರಿಸರ ಅಧ್ಯಯನಗಳು ಇರುತ್ತವೆ. ಬೋಧನೆಯು ಸಾಗುತ್ತಿರುವಾಗಲೇ ಮೂಲ ಪರಿಕಲ್ಪನೆಗಳನ್ನು ಮತ್ತೆ ಮತ್ತೆ ಪರಿಚಯಿಸಲಾಗುತ್ತದೆ. ಇಂತಹುದೊಂದು ಪ್ರಕ್ರಿಯೆಯಿಂದ ಆಗಷ್ಟೇ ಸೇರಿಕೊಂಡ ಮಗುವಿಗೆ ಪರಿಕಲ್ಪನೆಯನ್ನು ಪರಿಚಯಿಸಿದಂತಾಗುತ್ತದೆ ಮತ್ತು ಇತರರಿಗೆ ಪುನರ್‌ಮನನ ಮಾಡಿಸಿದಂತಾಗುತ್ತದೆ. ಬುನಾದಿ ಅಕ್ಷರ ಜ್ಞಾನ ಮತ್ತು ಲೆಕ್ಕಾಚಾರದ ಕೌಶಲ್ಯ ಒದಗಿಸುವ ಕಡೆಗೆ ಹೆಚ್ಚಿನ ಗಮನಹರಿಸಲಾಗುತ್ತದೆ.

ಮಕ್ಕಳನ್ನು ಆಲಿಸುವುದು, ಚರ್ಚೆ, ಆಟ, ರಚನೆ, ನಾಟಕ, ಕಲೆ ಮತ್ತಿತರ ಚಟುವಟಿಕೆಗಳಲ್ಲಿ ತೊಡಗಲು ಅವಕಾಶ ಕಲ್ಪಿಸಿ ಅವರು

ಕುತೂಹಲಿಗಳು, ಚುರುಕಾದ ಮತ್ತು ಲವಲವಿಕೆಯುಳ್ಳ ವಿದ್ಯಾರ್ಥಿಗಳಾಗಲು ಉತ್ತೇಜನ ನೀಡಲಾಗುತ್ತದೆ. ವಿವಿಧ ವಿಷಯಗಳನ್ನು ಕಲಿಸಲು ನಮ್ಮ ನಡುವೆ ದಿನನಿತ್ಯ ಸಿಗುವ ವಸ್ತುಗಳು ಮತ್ತು ಸಂಪನ್ಮೂಲಗಳನ್ನೇ ಬಳಸಿಕೊಳ್ಳಲಾಗುತ್ತದೆ. ಇಂತಹ ವಸ್ತುಗಳನ್ನು ರಚಿಸುವ ಪ್ರಕ್ರಿಯೆಯಲ್ಲಿ ಶಿಕ್ಷಕರೂ ಭಾಗಿಯಾಗಿರುತ್ತಾರೆ. ಪರಿಣಾಮವಾಗಿ ಇವುಗಳನ್ನು ವಿಷಯ ಅರಿತು ಬಳಸುತ್ತಾರೆ.

ಕೆಲವು ಕೌಶಲಗಳ ನೆರವಿನಿಂದ ಗಣಿತದ ಪರಿಕಲ್ಪನೆಗಳನ್ನು ಅರ್ಥ ಮಾಡಿಸಲಾಗುತ್ತದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಅನೇಕ ವಸ್ತುಗಳನ್ನು ಬಳಸಿಕೊಳ್ಳುತ್ತಾರೆ; ಕರೆನ್ಸಿ ನೋಟುಗಳ ಬಗೆಗೆ ಕಲಿಯುವಾಗ 'ಕಾಗದದ ನಕಲಿ ನೋಟು'ಗಳನ್ನು ಬಳಸುವುದು, ಸ್ಥಾನ ಮೌಲ್ಯವನ್ನು ಅರಿತುಕೊಳ್ಳುವ ಸಲುವಾಗಿ ಕಡ್ಡಿಗಳ ಕಟ್ಟುಗಳನ್ನು ಬಳಸುವುದು, ಸಮಯದ ವಿವರವನ್ನು ತಿಳಿಯಲು ನಿಜವಾದ ಗಡಿಯಾರವನ್ನು ಬಳಕೆ ಮಾಡುವುದು. ಕಲ್ಲಿನ ಹರಳುಗಳು, ಮಣಿಗಳು ಮತ್ತು ಬಳೆಗಳಂತಹ ವಸ್ತುಗಳನ್ನು ಬಳಸಿಕೊಂಡು ವಿವಿಧ ಪರಿಕಲ್ಪನೆಗಳನ್ನು ಮಕ್ಕಳಿಗೆ ತಿಳಿಸಿ–ಕೊಡಲಾಗುತ್ತದೆ.

ಇವಿಎಸ್ ತರಗತಿಗಳಲ್ಲಿ ಮಕ್ಕಳಿಗೆ ಅವರ ಸುತ್ತಲಿನ ಪರಿಸರದ ಬಗ್ಗೆ ಅರಿವು ಮೂಡಿಸಲು, ಬುದ್ಧಿಗೆ ಕಸರತ್ತು ಮತ್ತು ಗುಂಪು ಚರ್ಚೆ, ಪಾತ್ರಾಭಿನಯ, ಬ್ಯಾಂಕುಗಳಿಗೆ, ಅಂಚೆ ಕಚೇರಿ, ರೈಲು ನಿಲ್ದಾಣ, ಬಸ್ ನಿಲ್ದಾಣ ಮತ್ತು ಪೆಟ್ರೋಲ್ ಬಂಕ್‌ಗಳಿಗೆ ಭೇಟಿ ಮುಂತಾದವು ಸೇರಿರುತ್ತವೆ. ಈ ಹಂತದಲ್ಲಿ ಮಕ್ಕಳಿಗೆ ಹೆಚ್ಚು ಪ್ರಶ್ನೆಗಳನ್ನು ಕೇಳಲು ಮತ್ತು ತಮ್ಮ ಅರಿವು ಹಾಗೂ ಅನುಭವವನ್ನು ಹಂಚಿಕೊಳ್ಳಲು ಪ್ರೋತ್ಸಾಹ ನೀಡುವುದಕ್ಕೆ ಒತ್ತು ನೀಡಲಾಗುತ್ತದೆ.

ಕನ್ನಡವು ಮುಖ್ಯ ಭಾಷಾ ಮಾಧ್ಯಮವಾಗಿರುತ್ತದೆ. ಜೊತೆಗೆ ಒಂದಿಷ್ಟು ಪ್ರಾಥಮಿಕ ಇಂಗ್ಲಿಷ್ ಅನ್ನು ಮಕ್ಕಳಿಗೆ ಕಲಿಸಲಾಗುತ್ತದೆ. ಹಿಂದಿ ಮಾತೃಭಾಷೆಯಾಗಿರುವ ಮಕ್ಕಳಿಗೆ ಶಿಕ್ಷಕರು ಹಿಂದಿಯಲ್ಲಿ ವಿವರಣೆ ನೀಡುತ್ತಾರೆ. ಕಥೆಗಳು, ಕವನಗಳು, ಒಗಟುಗಳನ್ನು ಅಭಿನಯದ ಮೂಲಕ ಹೇಳುವುದು ಮತ್ತು ಭಾಷಾ ಕಲಿಕೆಯಲ್ಲಿ ವೃತ್ತಪತ್ರಿಕೆ, ಕಾಗದದ ಹೊದಿಕೆಗಳು ಇತ್ಯಾದಿ 'ಅಧಿಕೃತ' ಸಾಮಗ್ರಿಗಳನ್ನು ಬಳಸಿಕೊಳ್ಳುವುದು ಇಲ್ಲಿನ ಇನ್ನೊಂದು ವಿಶೇಷ. ದಿನಕ್ಕೊಂದು ಪದ (Word for the Day)ದಂತಹ ಚಟುವಟಿಕೆಗಳು ಮಕ್ಕಳಿಗೆ ಪ್ರಯೋಜನಕಾರಿ ಮತ್ತು ಮಕ್ಕಳು ಅದನ್ನು ಆನಂದಿಸುತ್ತಾರೆ.

ತಾವು ಕೇಳಿದ ಅಥವಾ ಓದಿದ ಹೊಸ ಪದಗಳನ್ನು ತರಲು ಮಕ್ಕಳನ್ನು ಪ್ರೋತ್ಸಾಹಿಸಲಾಗುತ್ತದೆ. ಇದು ಚರ್ಚೆಯನ್ನು ಉತ್ತೇಜಿಸುತ್ತದೆ ಮತ್ತು ಮಕ್ಕಳು ತಮ್ಮ ಅನುಭವದ ಬಗ್ಗೆ ಮಾತನಾಡಲು ಅವಕಾಶವನ್ನು ಪಡೆಯುತ್ತಾರೆ. ಆಯಾ ದಿನದ ಪದವನ್ನು ಕನ್ನಡ, ಇಂಗ್ಲಿಷ್ ಮತ್ತು ಅಗತ್ಯವಿದ್ದರೆ ಹಿಂದಿಯಲ್ಲೂ ಪ್ರದರ್ಶಿಸಲಾಗುವುದು. ಮಕ್ಕಳು ವಸ್ತುಗಳ, ಭಾವನೆಗಳ ಅಥವಾ ಘಟನೆಯನ್ನು ಕುರಿತ ಪದಗಳನ್ನು ಹಂಚಿಕೊಳ್ಳಬಹುದು. ಉದಾಹರಣೆಗೆ, ಆರಂಭಿಕ ಹಂತದಲ್ಲಿ, ಮಕ್ಕಳು ಸಂತೋಷ, ಕಾಲುಗೆಜ್ಜೆ ಅಥವಾ ಮೇಳಕ್ಕೆ ಹೋಗುವಂತಹ ಅನುಭವದ ಪದವನ್ನು ಎಲ್ಲಾ ಮೂರು ಭಾಷೆಗಳಲ್ಲಿ ಕೇಳುತ್ತಾರೆ. ನಂತರ ಅವರು ದಿನದ ಪದವನ್ನು ಬಳಸಿ ಕನ್ನಡದಲ್ಲಿ ಮತ್ತು ಸ್ವಲ್ಪ ಇಂಗ್ಲಿಷ್‌ನಲ್ಲಿ ಸರಳವಾದ ವಾಕ್ಯಗಳನ್ನು ಮಾಡುವ ಮೂಲಕ ಎರಡನೇ ಹಂತಕ್ಕೆ ಹೋಗುತ್ತಾರೆ.

ಪಠ್ಯಕ್ರಮದಲ್ಲಿ ಅಳವಡಿಸಲಾಗಿರುವ ಆರೋಗ್ಯದ ಘಟಕವು ಪೌಷ್ಟಿಕಾಂಶ ಮತ್ತು ಸ್ವಚ್ಛತೆ ಬಗೆಗಿನ ಚರ್ಚೆಗಳಿಗೆ ಪ್ರೋತ್ಸಾಹ ನೀಡುತ್ತದೆ. ಇದರ ಜೊತೆಗೆ ಕೈತೋಟ ಮತ್ತು ಅಡುಗೆ ಮಾಡುವುದು ಮಕ್ಕಳಿಗೆ ಯಾವತ್ತೂ ಖುಷಿ ಹಾಗೂ ಮೋಜಿನ ಸಂಗತಿ. ಇಂತಹ ಚಟುವಟಿಕೆಗಳ ಮೂಲಕ ಮಕ್ಕಳು ಸಮತೋಲಿತ ಆಹಾರ ಹಾಗೂ ಕಾಳುಗಳ ಮೊಳಕೆ ಬರಿಸುವುದು, ತರಕಾರಿ ಬೇಯಿಸುವುದು ಅಥವಾ ಚಪಾತಿ ಮಾಡುವುದು ಮುಂತಾದ ಅಡುಗೆಯ ಮೂಲಭೂತ ಕೆಲಸಗಳನ್ನು ಕಲಿಯುತ್ತಾರೆ. ಅಡುಗೆ ಕಾರ್ಯದಲ್ಲಿ ಭಾಷಾ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದರ ಜೊತೆಗೇ, ಅಂದಾಜು ಮಾಡುವ ಮತ್ತು ಅಳತೆ ಮಾಡುವ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

ಕೈತೋಟ ನಿರ್ವಹಣೆಯ ಸಂದರ್ಭದಲ್ಲಿ ಮಕ್ಕಳು ತರಕಾರಿ ಪಾತಿಗಳನ್ನು ಬೆಳೆಯುವುದನ್ನು ಮತ್ತು ಆರೈಕೆ ಮಾಡುವುದನ್ನು ಕಲಿಯುತ್ತಾರೆ. ಬೆಳೆದ ತರಕಾರಿಯನ್ನು ಹಂಚಿಕೊಳ್ಳುವುದನ್ನು ಕಲಿಯುತ್ತಾರೆ. ಕೆಲ ವರ್ಷಗಳ ಹಿಂದೆ ಮಕ್ಕಳು ನೆಟ್ಟ ಮಾವಿನ ಗಿಡ ಈ ವರ್ಷ ಫಲ ಕೊಟ್ಟಿದೆ. ಮಕ್ಕಳು ದೊಡ್ಡವರೊಂದಿಗೆ ಸೇರಿಕೊಂಡು ಮಾವಿನಕಾಯಿ ಉಪ್ಪಿನಕಾಯಿ ತಯಾರು ಮಾಡಿ ತಮ್ಮೊಳಗೆ ಹಂಚಿಕೊಂಡರು. ಇವೆಲ್ಲವನ್ನೂ ಪ್ರತಿಯೊಂದು ಮಾಡ್ಯೂಲ್–ನಲ್ಲಿಯೂ ಸೇರ್ಪಡೆ ಮಾಡಲಾಗಿದೆ ಮತ್ತು ಬಹುತೇಕ ರೂಪಾತ್ಮಕವಾಗಿವೆ.

ಪ್ರತಿಯೊಂದು ಮಗುವೂ ತನ್ನದೇ ಆದ ವೇಗದಲ್ಲಿ ಕಲಿಯುವುದರಿಂದ ಪ್ರತಿಯೊಂದು ಮಗುವಿನ ಪ್ರಗತಿಯನ್ನು ದಾಖಲು ಮಾಡಲು ಮೌಲ್ಯಮಾಪನವನ್ನು ಬಳಸಲಾಗುತ್ತದೆ. ನಾನಾ ವಿಧಗಳಲ್ಲಿ ತಮ್ಮ ಕಲಿಕೆಯನ್ನು ಪ್ರದರ್ಶಿಸಲು ಮಕ್ಕಳಿಗೆ ಅವಕಾಶಗಳು ಸಿಗುತ್ತವೆ. ಶಿಕ್ಷಕರ ನಿರಂತರ ಅವಲೋಕನ ಮತ್ತು ವಿಸ್ತೃತ ಟಿಪ್ಪಣಿಗಳು ಯೋಜನೆ ಮತ್ತು ಸಿದ್ಧತೆ ಮಾಡಿಕೊಳ್ಳಲು ಅನುಕೂಲ ಮಾಡಿಕೊಡುತ್ತವೆ. ಪ್ರತಿಯೊಂದು ಮಗುವಿಗೂ ಆತನ ಕೆಲಸ ಮತ್ತು ಪ್ರತ್ಯೇಕ ಖಾತೆಗಳ ಜೊತೆಗೆ ದಾಖಲೆಗಳನ್ನು ನಿರ್ವಹಿಸಿಕೊಂಡು ಬರಲಾಗುತ್ತದೆ. ಮಕ್ಕಳು ಒಮ್ಮೆ ಶಾಲೆಗೆ ಸೇರಿದ ಬಳಿಕ ಪೆನ್ನು ಮತ್ತು ಕಾಗದದ ಪರೀಕ್ಷೆಗಳಿಗೆ ಸಿದ್ಧಗೊಳ್ಳಬೇಕು ಎಂಬ ಒಂದೇ ಕಾರಣಕ್ಕೆ ಪ್ರತಿ ಮಾಡ್ಯುಲ್‌ನ ಕೊನೆಯಲ್ಲಿ ಒಟ್ಟಾರೆ ಮೌಲ್ಯಮಾಪನವನ್ನು ಮಾಡಲಾಗುತ್ತದೆ.

ಪಾಲುದಾರರ ಸಹಭಾಗಿತ್ವ

ಶಿಕ್ಷಕರು

ಶಿಕ್ಷಕರು ನಿಯತವಾಗಿ ಮತ್ತು ಬದ್ಧತೆಯಿಂದ ಮಕ್ಕಳ ಕಲಿಕೆಯಲ್ಲಿ ತೊಡಗಿ ಭಾವನಾತ್ಮಕವಾಗಿ ಮಕ್ಕಳಿಗೆ ಬೆಂಬಲ ನೀಡುತ್ತಾರೆ. ನಿರಂತರ ಮಾತುಕತೆ, ಅನುಭವ ಹಂಚಿಕೆ ಮತ್ತು ಪಾಲ್ಗೊಳ್ಳುವ ಪ್ರಕ್ರಿಯೆಯ ಮೂಲಕ ಆತ್ಮವಿಶ್ವಾಸವೃದ್ಧಿ, ಗುಂಪುಗಳಲ್ಲಿ ಕೆಲಸ ಮಾಡುವುದು, ಹಂಚಿಕೊಳ್ಳುವುದು ಹಾಗೂ ಹೊಸ ವಿದ್ಯಾರ್ಥಿಗಳನ್ನು ಸ್ನೇಹದಿಂದ ಸ್ವೀಕರಿಸುವುದು ಮತ್ತು ಅವರೊಡನೆ ಹೊಂದಿಕೊಳ್ಳುವ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಇಂತಹ ಎಲ್ಲ ಪ್ರಕ್ರಿಯೆಯಿಂದ ಮಕ್ಕಳು ಮುಖ್ಯವಾಹಿನಿಯ ಶಾಲಾ ಶಿಕ್ಷಣಕ್ಕೆ ಸುಗಮವಾಗಿ ಹಾಗೂ ಆತ್ಮವಿಶ್ವಾಸದಿಂದ ವರ್ಗಾವಣೆ ಆಗುವುದು ಸಾಧ್ಯವಾಗುತ್ತದೆ.

ಈ ಕೇಂದ್ರಗಳಿಗೆ ದೇಶದ ನಾನಾ ಭಾಗಗಳಿಂದ ನಾನಾ ಭಾಷೆಗಳನ್ನು ಮಾತನಾಡುವ ಮಕ್ಕಳು ಬರುವುದರಿಂದ ಇಲ್ಲಿನ

ಶಿಕ್ಷಕರು ಕನಿಷ್ಠ ಮೂರು ಭಾಷೆಗಳನ್ನು ಮಾತನಾಡುತ್ತಾರೆ ಮತ್ತು ಹೊಸದಾಗಿ ಬಂದ ಮಕ್ಕಳಿಗೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುತ್ತದೆ. ಅವರು ಪ್ರತಿಯೊಂದು ಮಗುವಿನ ಪ್ರಗತಿಯ ದಾಖಲೆಗಳನ್ನು ನಿರ್ವಹಿಸಿಕೊಂಡು ಬರುತ್ತಾರೆ. ಮಕ್ಕಳ ಪಾಲಕರು ಕೆಲಕಾಲದ ಮಟ್ಟಿಗೆ ತಮ್ಮ ಗ್ರಾಮಗಳಿಗೆ ಹಿಂದಿರುಗುವುದರಿಂದ ಮಕ್ಕಳು ಮಾಡ್ಯುಲ್‌ನ ಮಧ್ಯದಲ್ಲಿಯೇ ಬಿಟ್ಟು ತೆರಳುವ ಸಾಧ್ಯತೆಯೂ ಇರುತ್ತದೆ. ಇಂತಹ ಸಂದರ್ಭದಲ್ಲಿ ಮಕ್ಕಳು ಮರಳಿ ಕೇಂದ್ರಕ್ಕೆ ಬಂದಾಗ ಈ ದಾಖಲೆಗಳು ಅತ್ಯಂತ ಮುಖ್ಯವಾಗಿರುತ್ತವೆ.

ಶಿಕ್ಷಕರು ಯೋಜನೆ ರಚಿಸುವುದು ಮತ್ತು ವಿಚಾರಗಳನ್ನು ಹಂಚಿಕೊಳ್ಳುವುದು ಇಸಿಎಂಎಲ್ ಕಾರ್ಯಕ್ರಮದ ಅನಿವಾರ್ಯ ಭಾಗವಾಗಿರುತ್ತದೆ. ಪ್ರತಿ ಹದಿನೈದು ದಿನಗಳಿಗೊಮ್ಮೆ ಶಿಕ್ಷಕರು ಸಭೆ ಸೇರಿ ಹಿಂದಿನ ಹದಿನೈದು ದಿನಗಳ ಅನುಭವವನ್ನು ಹಂಚಿಕೊಳ್ಳುತ್ತಾರೆ ಮತ್ತು ಮುಂದಿನ ಹದಿನೈದು ದಿನಗಳ ಯೋಜನೆಯನ್ನು ರೂಪಿಸುತ್ತಾರೆ. ಅವರು ಸಮುದಾಯ, ಆರೋಗ್ಯ ಮತ್ತು ಪೌಷ್ಟಿಕಾಂಶ, ಮಕ್ಕಳ ಪ್ರಗತಿ ನಿರ್ವಹಣೆ, ಆಡಳಿತ ಇತ್ಯಾದಿ ವಿಷಯಗಳ ಬಗೆಗೂ ಚರ್ಚೆ ನಡೆಸುತ್ತಾರೆ.

ಮಕ್ಕಳ ಪ್ರಗತಿಯನ್ನು ತಿಳಿದುಕೊಳ್ಳಲು ಮತ್ತು ಅವರ ದಾಖಲೆಗಳನ್ನು ನವೀಕರಿಸಲು ಮಕ್ಕಳು ನೋಂದಣಿ ಆಗಿರುವ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರ ಜೊತೆಗೆ ಶಿಕ್ಷಕರು ನಿರಂತರ ಸಂಪರ್ಕದಲ್ಲಿರಲು ಒಟ್ಟುಗೂಡಿ ಪ್ರಯತ್ನ ಮಾಡುತ್ತಿರುತ್ತಾರೆ. ಕೇಂದ್ರದಲ್ಲಿ ಈ ಮಕ್ಕಳಿಗೆ ನಿರಂತರ ಬೆಂಬಲ ದೊರಕುತ್ತಿರುತ್ತದೆ. ಸರ್ಕಾರಿ ಶಾಲೆಯ ಸಿಬ್ಬಂದಿಯೊಂದಿಗೆ ಕೇಂದ್ರದಲ್ಲಿ ಅನುಸರಿಸಲಾಗುತ್ತಿರುವ ಪಠ್ಯಕ್ರಮ ಮತ್ತು ಸಂಸ್ಕೃತಿಯ ವಿವರಗಳನ್ನು ಹಂಚಿಕೊಳ್ಳುತ್ತಾರೆ. ಮಕ್ಕಳಿಗೆ ದೈಹಿಕವಾಗಿ ಯಾವುದೇ ಶಿಕ್ಷೆ ನೀಡಬಾರದೆಂಬುದರ ಬಗ್ಗೆ ಒತ್ತು ನೀಡುತ್ತಾರೆ.

ಸಂಸ್ಥೆಗಳ ನಡುವಿನ ಈ ಅನ್ಯೋನ್ಯ ಸಂಬಂಧ ಮಕ್ಕಳಿಗೆ ಪ್ರೇರಣೆ ನೀಡುವಲ್ಲಿ ಮತ್ತು ಯಾವುದೇ ಭಯ ಇಲ್ಲದೆ ವಾಡಿಕೆಯ ಶಾಲಾ ಶಿಕ್ಷಣ ಮುಂದುವರಿಸುವಂತೆ ಮಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಮಕ್ಕಳು ಹೋಗುವ ಸರ್ಕಾರಿ ಶಾಲೆಯ ಸಿಬ್ಬಂದಿ ಗಮನಿಸುವ ಬಹುಮುಖ್ಯ ಅಂಶವೇನೆಂದರೆ, ಕೇಂದ್ರದ ಸಂಪರ್ಕವನ್ನು ಹೊಂದಿರುವ ಮಕ್ಕಳು ಶಾಲೆಗೆ ಸೇರ್ಪಡೆಗೊಂಡಾಗ ಎಲ್ಲರೂ ತರಗತಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲದೇ ಇದ್ದರೂ ಕೂಡ ಹೆಚ್ಚು ಆತ್ಮವಿಶ್ವಾಸದಿಂದ ಇರುತ್ತಾರೆ ಎಂಬುದು. ಇದು ಅವರನ್ನು ಪ್ರೇರೇಪಿಸುವಲ್ಲಿ ಮತ್ತು ಕಲಿಯಲು ಉತ್ಸುಕರಾಗಿರಲು ಸಹಾಯ ಮಾಡುತ್ತದೆ.

**ಪಾಲಕರು/ಸಮುದಾಯ**

ಈ ಕೇಂದ್ರವು ದೈನಿಕ ಪರಿಪಾಠದೊಂದಿಗೆ ಮತ್ತು ಒಂದು ತಾತ್ವಿಕ ಸಿದ್ಧಾಂತದೊಂದಿಗೆ ಔಪಚಾರಿಕ ಕಲಿಕಾ ಸ್ಥಳವಾಗಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಪಾಲಕರ ಸಮುದಾಯದವರು ಬಹಳ ಸಮಯದ ನಂತರ ಮತ್ತು ಸತತ ಮಾತುಕತೆಯ ನಂತರ ಅರ್ಥ ಮಾಡಿಕೊಂಡಿದ್ದಾರೆ ಹಾಗೂ ಮನಗಂಡಿದ್ದಾರೆ. ಕಟ್ಟಡ ನಿರ್ಮಾಣದ ನಿವೇಶನದಲ್ಲಿ ಪಾಲಕರ ವಾಸ್ತವ್ಯ ಅನಿಶ್ಚಿತವಾಗಿರುವುದರಿಂದ ಅವರೊಂದಿಗೆ ಆಗಾಗ ಸಂಪರ್ಕದಲ್ಲಿರುವುದು ಮಕ್ಕಳು ಶಾಲಾ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸದಂತೆ ಮತ್ತು ಮುಖ್ಯವಾಹಿನಿಗೆ ಸೇರುವಂತೆ ಮಾಡಲು ನಿರ್ಣಾಯಕವಾಗಿರುತ್ತದೆ. ಶಿಕ್ಷಕರು ಪಾಲಕರೊಂದಿಗೆ ನಿರಂತರ ಸಂಪರ್ಕದಲ್ಲಿ ಇರುತ್ತಾರೆ ಮತ್ತು ಕೇಂದ್ರದಲ್ಲಿ ನಡೆಯುವ ಪ್ರಕ್ರಿಯೆಗಳನ್ನು ಅವರಿಗೆ ಮನವರಿಕೆ ಮಾಡಿಸುತ್ತಾರೆ.

ಸಮುದಾಯದ ಸದಸ್ಯರು ಕೇಂದ್ರದ ದಿನ–ನಿತ್ಯದ ಆಗುಹೋಗುಗಳಲ್ಲಿ ಭಾಗಿಯಾಗುತ್ತಾರೆ. ನಿವೇಶನದಲ್ಲಿ ಕೆಲಸ ಮಾಡದೇ ಇರುವ, ಮಕ್ಕಳನ್ನು ಹೊಂದಿರುವ ತಾಯಂದಿರು ಕೇಂದ್ರದಲ್ಲಿರುವ ಇತರ ಮಕ್ಕಳ ಬಗ್ಗೆ ನಿಗಾ ವಹಿಸಲು ಸಹಾಯ ಮಾಡುತ್ತಾರೆ. ಅವರು ಮಕ್ಕಳಿಗೆ ಊಟ–ತಿಂಡಿ ಬಡಿಸುತ್ತಾರೆ, ಕಥೆ ಹೇಳುತ್ತಾರೆ, ಹಾಡುಗಳನ್ನು ಹಾಡುತ್ತ ಸಮಯ ಕಳೆಯುತ್ತಾರೆ. ಸಮುದಾಯದ ಸದಸ್ಯರು ಇತರ ಕೆಲಸಗಳಲ್ಲಿಯೂ ಸಹಾಯಕ್ಕೆ ಬರುತ್ತಾರೆ; ಹೊಸ ಮಕ್ಕಳನ್ನು ಕೇಂದ್ರಕ್ಕೆ ಕರೆತರುವುದು, ಕಾರ್ಯಕ್ರಮಗಳಲ್ಲಿ, ಕೇಂದ್ರದ ನಿರ್ವಹಣೆಯಲ್ಲಿ, ಬಣ್ಣಬಳಿಯುವುದು ಮತ್ತು ಸ್ವಚ್ಛಗೊಳಿಸುವುದೂ ಸೇರಿದಂತೆ ಆವರಣವನ್ನು ಸುಸ್ಥಿತಿಯಲ್ಲಿ ಇರಿಸಿಕೊಂಡು ಬರುವುದಕ್ಕೆ ನೆರವಾಗುತ್ತಾರೆ. ಅವರ ಅನುಭವಗಳನ್ನು ಹಂಚಿಕೊಳ್ಳಲು, ಕೃಷಿಯ ಬಗ್ಗೆ ಮಾತನಾಡಲು ಅಥವಾ ನಿವೇಶನದಲ್ಲಿ ಅವರು ಮಾಡುವ ಕೆಲಸ, ನಿರ್ಮಾಣದಲ್ಲಿ ಬಳಸಲಾಗುವ ಸಾಮಗ್ರಿಗಳು, ಸುರಕ್ಷತಾ ಮುಂಜಾಗ್ರತೆ ಇತ್ಯಾದಿ ಬಗ್ಗೆ ಮಾತನಾಡುವಂತೆ ಅವರನ್ನು ಆಹ್ವಾನಿಸಲಾಗುತ್ತದೆ. ಪಾಲಕರು ತರಗತಿಯಲ್ಲೇ ಕುಳಿತುಕೊಂಡು ಮಕ್ಕಳ ಕಲಿಕೆಯನ್ನು ವೀಕ್ಷಿಸಲು ಕೂಡ ಉತ್ತೇಜನ ನೀಡಲಾಗುತ್ತದೆ.

ಪಾಲಕರು, ಹಳೆಯ ವಿದ್ಯಾರ್ಥಿಗಳು ಮತ್ತು ಕಟ್ಟಡ ನಿರ್ಮಾಣಕಾರರ ಪ್ರತಿನಿಧಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿದ್ದು, ಮಕ್ಕಳ ಜಾಡು ಹಿಡಿಯಲು, ಅವರು ನಿಯಮಿತವಾಗಿ ಶಾಲೆಗೆ ಹಾಜರಾಗುವಂತೆ ಮಾಡಲು, ಮಕ್ಕಳ ಶಿಕ್ಷಣದ ಬಗ್ಗೆ ಪಾಲಕರಿಗೆ ಪ್ರೇರಣೆ ನೀಡಲು, ಮಕ್ಕಳ ಸುರಕ್ಷತೆ ಮತ್ತು ಭದ್ರತೆಯನ್ನು ಕುರಿತು ಸಮುದಾಯಕ್ಕೆ ಅರಿವು ಮೂಡಿಸುವುದು ಮತ್ತಿತರ ವಿಚಾರಗಳಲ್ಲಿ ಕೇಂದ್ರದಲ್ಲಿರುವ ತಂಡಕ್ಕೆ ನೆರವಾಗುವ ಜವಾಬ್ದಾರಿ ಈ ಸಮಿತಿಯದ್ದಾಗಿದೆ. ಸಾಧ್ಯವಾದರೆ ತಮ್ಮ ಮಕ್ಕಳ ಶಿಕ್ಷಣಕ್ಕೆ ಬೇಕಾದ ಹಣವನ್ನು ಬ್ಯಾಂಕ್‌ನಲ್ಲಿ ಇಡಲೂ ಪಾಲಕರಿಗೆ ಉತ್ತೇಜನ ನೀಡಲಾಗುತ್ತದೆ.

**ಅನುಭವದಿಂದ ಕಲಿತ ಪಾಠ**

ಈ ಕಾರ್ಯಕ್ರಮದ ಕೆಲವು ಪ್ರಮುಖ ಅಂಶಗಳು ಇದನ್ನು ಸಾಧ್ಯವಾಗುವಂತೆ ಮಾಡಿವೆ. ಮೊಟ್ಟಮೊದಲ ಹಾಗೂ ಬಹುಮುಖ್ಯ ಎನ್ನಬಹುದಾದ ಪಾಠ ಏನೆಂದರೆ, ನಾವು ನೋಡುತ್ತಿರುವ ಈ ಜನಸಮುದಾಯ ತನ್ನ ದುರ್ಬಲತೆಗಳಿಂದ ಸೀಮಿತವಾಗಿದೆ. ಆ ಬಳಿಕ ನಮಗೆ ಅತ್ಯಂತ ನಿರ್ಣಾಯಕವಾಗಿ ಕಂಡುಬಂದ ಅಗತ್ಯತೆ ಏನೆಂದರೆ ಅವರಿಗೆ ಸುರಕ್ಷಿತ ಹಾಗೂ ಸಬಲೀಕರಣದ ವಾತಾವರಣವನ್ನು ನಿರ್ಮಾಣ ಮಾಡುವುದು. ಎರಡನೇ ಅತ್ಯಂತ ಪ್ರಮುಖ ಅಂಶ, ಇಂತಹ ಮಕ್ಕಳ ಜೊತೆ ಬಾಂಧವ್ಯ ಬೆಸೆಯುವ ಬಗ್ಗೆ ಮತ್ತು ಅದಕ್ಕಾಗಿ ಸೂಕ್ತವಾದ ಬೋಧನಾ ವಿಧಾನವನ್ನು ರೂಪಿಸಿಕೊಳ್ಳುವುದರಲ್ಲಿ ಶಿಕ್ಷಕರ ಪಾತ್ರ ಹೇಗಿರಬೇಕು ಎಂಬುದು ಮತ್ತು ಈ ವಿಷಯಾಭಿಮುಖವಾಗಿ ಅವರನ್ನು ಸಿದ್ಧಗೊಳಿಸುವುದು, ಮಕ್ಕಳನ್ನು ನಿಯತ ಶಾಲಾ ಶಿಕ್ಷಣಕ್ಕೆ ಯಶಸ್ವಿಯಾಗಿ ವರ್ಗಾಯಿಸುವುದರಲ್ಲಿ ಶಿಕ್ಷಕರ ಪಾತ್ರ ನಿರ್ಣಾಯಕವಾದುದು. ಈ ಅಂಶಕ್ಕೆ ಹೆಚ್ಚು ಒತ್ತು ನೀಡಬೇಕು ಹಾಗೂ ಅದನ್ನು ಇನ್ನಷ್ಟು ಬಲ ಪಡಿಸಬೇಕು.

ಇಂಥ ಸನ್ನಿವೇಶದಲ್ಲಿ ವಿಧಾನ ಮತ್ತು ಬೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮದ ಪಾತ್ರವು ಬಹುಮುಖ್ಯವಾಗಿ ಹೊರಹೊಮ್ಮಿದರೂ ಮೇಲಿನ ಎರಡು ಅಂಶಗಳ ಯಶಸ್ವೀ ಅನುಷ್ಠಾನವಾದಾಗ ಮಾತ್ರ ಇದು ಸಫಲವಾಗುತ್ತದೆ.

ಅಂತಿಮವಾಗಿ ಪಾಲಕರ ಸಮುದಾಯವನ್ನು ಇವರು ಸಾಮರ್ಥ್ಯ ವರ್ಧನೆಯನ್ನು ಸೀಮಿತಗೊಳಿಸುತ್ತಾರೆ ಎಂದು ನೋಡುವ ಬದಲು ಸಬಲೀಕರಣ ಮಾಡಬಲ್ಲ ಒಂದು ಅಂಶವೆಂಬುದಾಗಿ ನೋಡಬಹುದಾಗಿದೆ. ತಮ್ಮ ಮಕ್ಕಳನ್ನು ಮುಖ್ಯವಾಹಿನಿಯ ಶಾಲಾಶಿಕ್ಷಣಕ್ಕೆ ಮತ್ತೆ ಸೇರಿಸುವಲ್ಲಿ ಅವರು ವಹಿಸಬೇಕಾದ ಪಾತ್ರಕ್ಕೆ ಯಾವ ಬೆಂಬಲ ನೀಡಬೇಕೆಂಬ ವಿಚಾರದ ಬಗ್ಗೆ ಗಮನಹರಿಸಬೇಕಾಗಿದೆ.

---




**ಶೋಭಾ ಎಲ್. ಕವೂರಿ** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಬೆಂಗಳೂರು ಜಿಲ್ಲಾ ಸಂಸ್ಥೆಯ ಸದಸ್ಯರು. ಶಿಕ್ಷಕಿಯಾಗಿರುವ ಶೋಭಾ ಅವರು ರಾಜಸ್ಥಾನದಲ್ಲಿ ಶೈಕ್ಷಣಿಕ ಮತ್ತು ಅಭಿವೃದ್ಧಿ ಉಪಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೊಟ್ಟ ಮೊದಲ ಆರು ಅಜೀಂ ಪ್ರೇಮ್‌ಜಿ ಶಾಲೆಗಳನ್ನು ಸ್ಥಾಪಿಸಲು ಕಾರಣವಾದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಶಾಲಾ ತಂಡದ ಒಂದು ಭಾಗವಾಗಿದ್ದರು. ಅವರು ಈ ಶಾಲೆಗಳಲ್ಲಿ ಪಠ್ಯಕ್ರಮ ಅಭಿವೃದ್ಧಿ, ಶಿಕ್ಷಕರ ವೃತ್ತೀಯ ಅಭಿವೃದ್ಧಿ ಮತ್ತು ಭಾಷಾ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ವಿಸ್ತೃತವಾಗಿ ಕೆಲಸ ಮಾಡಿದ್ದಾರೆ. ಅವರನ್ನು ಇಲ್ಲಿ ಸಂಪರ್ಕಿಸಬಹುದಾಗಿದೆ shobha.kavoori@azimpremjifoundation.org



**ಶುಭಾ** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸದಸ್ಯರು. ಪ್ರಸ್ತುತ ಬೆಂಗಳೂರಿನಲ್ಲಿ ವಲಸೆ ಕಾರ್ಮಿಕರ ಮಕ್ಕಳ ಸೇತು ಶಿಕ್ಷಣ ಕೇಂದ್ರದ ನಿರ್ವಹಣೆಯನ್ನು ನೋಡಿಕೊಳ್ಳುತ್ತಿರುವ ಅವರು, ಬೆಂಗಳೂರು ಜಿಲ್ಲಾ ಸಂಸ್ಥೆಯಲ್ಲಿ ಚಿಕ್ಕ ಮಕ್ಕಳ ಶಿಕ್ಷಣದ ಉಪಕ್ರಮಕ್ಕೆ ಸಂಬಂಧಿಸಿದ ಸಮನ್ವಯ ಕೆಲಸದಲ್ಲಿಯೂ ನಿರತರಾಗಿದ್ದಾರೆ. ಶಾಲಾಪೂರ್ವ ಪಠ್ಯಕ್ರಮ ಮತ್ತು ಶಿಕ್ಷಕರ ಸಾಮರ್ಥ್ಯ ವರ್ಧನೆ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಶಿಕ್ಷಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜೊತೆಗೂ ಶ್ರದ್ಧೆಯಿಂದ ತೊಡಗಿಸಿಕೊಂಡಿದ್ದಾರೆ. ಮೊಟ್ಟ ಮೊದಲ ಆರು ಅಜೀಂ ಪ್ರೇಮ್‌ಜಿ ಶಾಲೆಗಳನ್ನು ಸ್ಥಾಪಿಸಿದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಶಾಲಾ ತಂಡದ ಭಾಗವಾಗಿ ಅವರು ಕೆಲಸ ಮಾಡಿದ್ದರು. ಪಠ್ಯಕ್ರಮ ಅಭಿವೃದ್ಧಿ ಮತ್ತು ಶಿಕ್ಷಕರ ವೃತ್ತೀಯ ಅಭಿವೃದ್ಧಿಯ ಕ್ಷೇತ್ರಗಳಲ್ಲಿಯೂ ಅವರು ಬಹಳ ಕೆಲಸ ಮಾಡಿದ್ದಾರೆ. ಅವರನ್ನು ಇಲ್ಲಿ ಸಂಪರ್ಕಿಸಬಹುದು: shubha@azimpremjifoundation.org


ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**